ಅಸಲು ದಾವಾ ಸಂಖ್ಯೆ 39/2014

ಡಿ.ಡಬ್ಲ್ಯು:1/6 ನೇ ಪ್ರತಿವಾದಿ

**ದಿನಾಂಕ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲು : ಶ್ರೀ ಎ. ಎನ್. ವಾದಿ ಪರ ವಕೀಲರಿಂದ</u>**

ಕರ್ನಾಟಕ ಹೌಸಿಂಗ್ ಬೊರ್ಡ್ ನ ಮುಖ್ಯ ಕಚೇರಿ ಬೆಂಗಳೂರಿನಲ್ಲಿ ಇದ್ದು,ಪ್ರಾದೇಶಿಕ ಕಚೇರಿ ಚಿಕ್ಕಬಳ್ಳಾಪುರದಲ್ಲಿದೆ. ಸರ್ವೇ ನಂರ್ 154 ಮತ್ತು 156 ರ ಸಂಬಂಧ ಭೂ ಸ್ವಾಧೀನವಾದಾಗ, ಸದರಿ ಸ್ವತ್ತುಗಳು ಮೊದಲು ಕೋಲಾರ ಜಿಲ್ಲೆಗೆ ಒಳಪಟ್ಟಿದ್ದು, ಈಗ ಸದರಿ ಸ್ವತ್ತುಗಳು ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿವೆ ಎಂದರೆ ಸರಿ. ದಿನಾಂಕ 23.10.1983 ರಿಂದ ಕೆ.ಹೆಚ್.ಬಿ.ರವರು ಟಿ.ಎಂ.ಸಿ ಬಾಗೇಪಲ್ಲಿರವರಿಗೆ ದಾವಾ ಸ್ವತ್ತನ್ನು ಹಾಸ್ತಾಂತರಿಸುವ ಬಗ್ಗೆ ಸಂಪೂರ್ಣ ಕಡತವನ್ನು ನಿರ್ವಹಿಸಿರುವ ಬಗ್ಗೆ ಗೊತ್ತಿಲ್ಲ. ನಾನು ಸದರಿ ಮೂಲ ಕಡತವನ್ನು ನೋಡಿರುವುದಿಲ್ಲ. ಸದರಿ ಮೂಲ ಕಡತ ಮುಖ್ಯ ಕಚೇರಿ ಅಥವಾ ಪ್ರಾದೇಶಿಕ ಕಚೇರಿಯಲ್ಲಿ ಇರಬಹುದು. ಮೂಲ ಕಡತದಲ್ಲಿ ಸರ್ವೇ ನಂಬರ್. 154 ಮತ್ತು 156 ರ ವಿಸ್ತೀರ್ಣ 5 ಎಕರೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರಗಳು, ಸರ್ಕಾರದ ಆದೇಶ ಪ್ರತಿಗಳು, ಸಾರ್ವಜನಿಕ ಅರ್ಜಿಗಳು, ವಾದಿಯು ನೀಡಿದ ಅರ್ಜಿಗಳು, ನೋಟೀಸುಗಳು ಮತ್ತು ಭೂ ಪರಿವರ್ತನಾ ಆದೇಶಗಳು, ಲೇಔಟ್ ಮಂಜೂರಾತಿ ಪತ್ರಗಳು ಇರಬಹುದು ಎಂದರೆ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮೂಲ ಕಡತವನ್ನು ಪರಿಶೀಲಿಸಿದೇ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯ ಸ್ವತಃ ನಮ್ಮಲ್ಲಿ ಲಭ್ಯವಿರುವ ಹಾಗೂ ಕಂದಾಯ ಇಲಾಖೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಲಭ್ಯವಿದ್ದರೆ ಮೂಲ ಕಡತವನ್ನು ಹಾಜರುಪಡಿಸುವೆ.

ಕೆ.ಹೆಚ್.ಬಿ. ಯ ಚಿಕ್ಕಬಳ್ಳಾಪುರದ ಕಚೇರಿಯಲ್ಲಿ ಮೂಲ ಕಡತ ಇಲ್ಲ ಎಂದರೆ ಸರಿ. ದಿನಾಂಕ 19.02.1976 ರಲ್ಲಿ ಜಮೀನು ಮೌಲ್ಯ ಮಾಪನ ಮಾಡುವಾಗ ನಿಪಿ–36 ರಂತೆ ಸರ್ವೇ ನಂಬರ್ 154 ಮತ್ತು 156 ರಲ್ಲಿ 5 ಎಕರೆ ಸ್ವತ್ತನ್ನು ಭೂ ಸ್ವಾಧೀನ ಮಾಡುವ ಬಗ್ಗೆ ನಮೂದಿಸಿದೆ ಎಂದರೆ ಸರಿ.

ದಿನಾಂಕ 31.10.1976 ರಂದು ಉಪ – ವಿಭಾಗಾಧಿಕಾರಿಗಳು ಬೆಂಗಳೂರಿನ ಕೆ.ಹೆಚ್.ಬಿ. ಕಚೇರಿಗೆ ಅರ್ಜಿ ಬರೆದು ದಿನ ಪತ್ರಿಕೆ ಪ್ರಕಟಣೆ ಪಡಿಸುವ ಬಗ್ಗೆ ಬರೆದಿದ್ದಾರೆ ಎಂದರೆ ಸರಿಯಲ್ಲ.

ಚಿಕ್ಕಬಳ್ಳಾಪುರದ ಉಪ –ವಿಭಾಗಾಧಿಕಾರಿಗಳು ನಿಪಿ–37 ರಲ್ಲಿ ಸರ್ವೇ ನಂಬರ್ 154 ಮತ್ತು 156 ರಲ್ಲಿ 5 ಎಕರೆ ಭೂ ಸ್ವಾಧೀನವಾಗಿರುವ ಬಗ್ಗೆ ಆ ವಿಷಯದಲ್ಲಿ ನಮೂದಿಸಿದ್ದಾರೆ ಎಂದರೆ ಸರಿ.

ದಿನಾಂಕ 11.01.1977 ರಂದು ಉಪ – ವಿಭಾಗಾಧಿಕಾರಿಗಳು ರವರು ಕೋಲಾರ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದು ಸರ್ವೇ ನಂಬರ್ 154 ಮತ್ತು 156 ರಲ್ಲಿ 5 ಎಕರೆ ಭೂ ಸ್ವಾಧೀನವಾಗಿರುವ ಬಗ್ಗೆ ಆ ವಿಷಯದಲ್ಲಿ ನಮೂದಿಸಿದ್ದು, ಸದರಿ ಪ್ರತಿಯನ್ನು ನಮ್ಮ ಕಚೇರಿಗೆ ಕಳುಹಿಸಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ಪ್ರತಿ ನಮ್ಮ ಕಚೇರಿಗೆ ತಲುಪಿರುವ ಬಗ್ಗೆ ಸ್ವೀಕೃತಿ ಇಲ್ಲ ಎಂದು ನುಡಿಯುತ್ತಾರೆ, ಸದರಿ ವ್ಯವಹಾರ ಎಲ್.ಎ.ಕ್ಯೂ.ಪಿ. 25/1975– 1976 ರಂತೆ ನಡೆದಿದೆ ಎಂದರೆ ಸರಿ.

ಎಲ್.ಎ.ಕ್ಯೂ.ಎಫ್ 4–5/1978–1979 ರ ಆದೇಶದಲ್ಲಿ ವಿಸ್ತೀರ್ಣ 4 ಎಕರೆ ಭೂ ಸ್ವಾಧೀನವಾಗಿದೆ ಎಂದರೆ ಸಾಕ್ಷಿಯು ಪೂರ್ಣ ಸ್ವತ್ತು ವಿಸ್ತೀರ್ಣ 6 ಎಕರೆ 8 ಗುಂಟೆ ಇದ್ದು, ಅದರಲಿಲ ಖರಾಬು 1 ಎಕರೆ 10 ಗುಂಟೆ ಇದ್ದು, ಖರಾಬು ಹೊರತುಪಡಿಸಿದರೆ ವಿಸ್ತೀರ್ಣ 4 ಎಕರೆ 0.38 ಗುಂಟೆ ಉಳಿಯುತ್ತದೆ. ಆದರೆ 0.38 ಗುಂಟೆ ಹೊರತುಪಡಿಸಿ 4 ಎಕರೆ ಸ್ವತನ್ನು ಭೂ ಸ್ವಾಧೀನ ಮಾಡಿ, ವಿಸ್ತೀರ್ಣ 4 ಎಕರೆಗೆ ಮಾತ್ರ ಭೂ ಪರಿಹಾರ ನೀಡಿದ್ದು, ಉಳಿದ 0.38 ಗುಂಟೆ ಸ್ವತ್ತನ್ನು ಮಾಲೀಕರಿಗೆ ಬಿಡಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಖರಾಬು ಸ್ವತ್ತು ಸರ್ಕಾರಕ್ಕೆ ಸೇರಿದ್ದು, ಅದನ್ನು ಭೂ ಸ್ವಾಧೀನ ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ನಿಡಿ–5 ರ ಆದೇಶದಂತೆ ಸರ್ವೇ ನಂಬರ್ 154 ರಲ್ಲಿ ಒಟ್ಟು ವಿಸ್ತೀರ್ಣ 6 ಎಕರೆ 0.08 ಗುಂಟೆ ಇದ್ದು, ಆ ಪೈಕಿ ವಿಸ್ತೀರ್ಣ 4 ಎಕರೆ ಸ್ವತ್ತನ್ನು ಭೂ ಸ್ವಾಧೀನ ಮಾಡಲಾಗಿದೆ ಎಂದರೆ ಸಾಕ್ಷಿಯು ಐನ್ ಸ್ವತ್ತಿನಲ್ಲಿ 4 ಎಕರೆ ಸ್ವತ್ತನ್ನು ಭೂ ಸ್ವಾಧೀನ ಮಾಡಲಾಗಿದೆ ಎಂದು ನುಡಿಯುತ್ತಾರೆ.

ನ್ಯಾಯಲಯದ ಪ್ರಶ್ನೆ ಃ ಸರ್ವೇ ನಂಬರ್ 154 ರಲ್ಲಿ ಒಟ್ಟು ಎಷ್ಟು ಎಕರೆ ಖರಾಬು ಸ್ವತ್ತು ಇದೆ ಮತ್ತು ಅದರ ಸ್ವರೂಪ ಏನೆಂದರೆ ಸಾಕ್ಷಿಯು ಸದರಿ ಸರ್ವೇ ನಂಬರ್ ನಲ್ಲಿ 1 ಎಕರೆ 0.10 ಗುಂಟೆ **'ಅ'** ಖರಾಬು ಇದೆ ಎಂದು ನುಡಿಯುತ್ತಾರೆ.

ನಿಡಿ–4 ರ ಪ್ರಕಾರ **‘ಬಿ’** ಖರಾಬು ಜಮೀನುಗಳಿಗೆ ಯಾವುದೇ ಪರಿಹಾರ ನೀಡುವ ಪ್ರಮೇಯ ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿರುವ 1 ಎಕರೆ 0.10 ಗುಂಟೆ ಸ್ವತ್ತು **‘ಅ’** ಖರಾಬು ಎಂದರೆ ಆರ್.ಟಿ.ಸಿ. ಪ್ರಕಾರ ಸರಿ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ವಾದಿಗಳ ಕುಟುಂಬಕ್ಕೆ ಮಂಜೂರಾಗಿರುವ ಸ್ವತ್ತಾಗಿರುವುದಿಲ್ಲ, ಆದರೆ ಅದು ಅವರ ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ.

ನಿಡಿ–2 ರ ಸ್ಕೆಚ್ ಅನ್ನು ನಮ್ಮ ಕೇಚರಿಯಿಂದ ಅರ್ಜಿ ನೀಡಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನಿಡಿ–2 ರಲ್ಲಿ ಏನು ಬರೆದಿದೆ ಎಂದರೆ ನಾನು ಸರ್ವೇ ಅಧಿಕಾರಿಯಲ್ಲ, ಹಾಗಾಗಿ ಅದರಲ್ಲಿ ಬರೆದಿರುವುದನ್ನು ಮಾತ್ರ ಓದಬಲ್ಲೆ ಎಂದು ನುಡಿಯುತ್ತಾರೆ. ದಿನಾಂಕ 06.05.1982 ರಂದು ಸರ್ವೇ ಮಾಡಿಸುವಾಗ ಸದರಿ ಸ್ವತ್ತಿನ ಅಜು–ಬಾಜುದಾರಿಗೆ ನೋಟಿಸು ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ.

ಕೆ.ಹೆಚ್.ಬಿ. ರವರು ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿದ್ದೇನೆ. ಪ್ರತಿವಾದ ಪತ್ರದಲ್ಲಿ ತಿಳಿಸಿರುವಂತೆ ವಿಸ್ತೀರ್ಣ 4 ಎಕರೆ ಸ್ವತ್ತಿನ ಜೊತೆಗೆ ಖರಾಬು ವಿಸ್ತೀರ್ಣ 1 ಎಕರೆ 0.10 ಗುಂಟೆ ಸ್ವತ್ತು ನಮಗೆ ಬಂದಿರುವುದಾಗಿ ತಿಳಿಸಲಾಗಿದೆ ಎಂದರೆ ಸರಿ. ಆ ರೀತಿ ಖರಾಬು ಸ್ವತ್ತು ಸಹ ನಮ್ಮ ಸ್ವಾಧೀನಕ್ಕೆ ಬಂದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಾನು ಆರ್.ಟಿ.ಸಿ. ಹಾಜರುಪಡಿಸಿದ್ದು, ಉಳಿದ ದಾಖಲೆಗಳನ್ನು ಕಂದಾಯ ಇಲಾಖೆಯಲ್ಲಿ ಪಡೆದುಕೊಳ್ಳಬಹುದು ಎಂದು ನುಡಿಯುತ್ತಾರೆ. 4 ಎಕರೆ ಐನ್ ಸ್ವತ್ತಿನ ಜೊತೆಗೆ ಖರಾಬು ವಿಸ್ತೀರ್ಣ 1 ಎಕರೆ 0.10 ಗುಂಟೆ ಸ್ವತ್ತನ್ನು ಸರ್ಕಾರದವರು ನಮ್ಮ ವಶಕ್ಕೆ ನೀಡಿರುವ ಬಗ್ಗೆ ದಾಖಲೆಗಳು ಇಲ್ಲ ಮತ್ತು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 154 ರಲ್ಲಿ ಐನ್ ಸ್ವತ್ತು 4 ಎಕರೆ ಸ್ವತ್ತನ್ನು ಹೊರತುಪಡಿಸಿ ಖರಾಬು ಸ್ವತ್ತು 1 ಎಕರೆ 0.10 ಗುಂಟೆ ಸ್ವತ್ತನ್ನು ನಮ್ಮ ಸ್ವಾಧೀನಕ್ಕೆ ನೀಡಿಲ್ಲ ಮತ್ತು ಅದರ ಬಗ್ಗೆ ದಾಖಲೆಗಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ಕಾರವು ವಿಸ್ತೀರ್ಣ 4 ಎಕರೆ ಜೊತೆಗೆ ದಾವಾ ಸ್ವತ್ತನ್ನು ಸೇರಿಸಿ ಅಭಿವೃದ್ಧಿ ಪಡಿಸಲು ಕೆ.ಹೆಚ್.ಬಿ.ರವರಿಗೆ ನೀಡಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಕೆ.ಹೆಚ್.ಬಿ.ರವರು ಪೋಡಿ ಮಾಡಲು ಯಾವಾಗ ಅರ್ಜಿ ನೀಡಿದ್ದಾರೆ ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ಪೋಡಿಯಾಗಿದೆ ಗೊತ್ತಿಲ್ಲ. ಸರ್ವೇ ನಂಬರ್ 154 ರಲ್ಲಿ ಮ್ಯುಟೇಶನ್ ಆಗಿರುವುದಿಲ್ಲ

ಎಂದರೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ತಿಳಿಸಿರುವಂತೆ ಯಾವುದೇ ಪೋಡಿ, ಮ್ಯುಟೇಶನ್ ಆಗಿಲ್ಲದಿದ್ದರೂ ಸಹ ಯಾವುದೇ ವಿಚಾರವನ್ನು ತಿಳಿಯದೇ ಕೆ.ಹೆಚ್.ಬಿ. ಪರವಾಗಿ ಪ್ರತಿವಾದ ಪತ್ರ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಮ್ಯುಟೇಶನ್ ಬಗ್ಗೆ ಪ್ರತಿವಾದ ಪತ್ರ ಖಂಡಿಕೆ 3(ಬಿ) ನಲ್ಲಿ ತಿಳಿಸಿದ್ದು, ಸದರಿ ಪ್ರತಿವಾದ ಪತ್ರಕ್ಕೆ ನಾನು ಮಾಹಿತಿ ನೀಡಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 154 ರ ಸಂಬಂಧ ಯಾವುದೇ ಮ್ಯುಟೇಶನ್ ಪ್ರಕ್ರಿಯೆ ನಡೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರ ಸಲ್ಲಿಸುವ ವೇಳೆಗೆ ಸದರಿ ಮ್ಯುಟೇಶನ್ ಇರುವ ಬಗ್ಗೆ ಪರಿಶೀಲಿಸಿಲ್ಲ.

ಕೆ.ಹೆಚ್.ಬಿ.ರವರಿಗೆ ಟೌನ್ ಪ್ಲಾನಿಂಗ್ ನಿಯಮಗಳು ಅನ್ವಯಿಸುತ್ತವೆ ಎಂದರೆ ಸರಿ. ಸರ್ವೇ ನಂಬರ್ 154 ಮತ್ತು 156 ರಲ್ಲಿ ಮನೆಗಳನ್ನು ನಿರ್ಮಿಸುವ ಪೂರ್ವ ಸದರಿ ಜಮೀನುಗಳು ಭೂ ಪರಿವರ್ತನೆ ಆಗಬೇಕು, ಲೇಔಟ್ ಪ್ಲಾನ್ ಮಾನ್ಯವಾಗಬೇಕು ಮತ್ತು ಕಟ್ಟಡ ಪ್ಲಾನ್ ಮಾನ್ಯವಾಗಬೇಕು ಎಂದರೆ ಭೂ ಸ್ವಾಧೀನ ಜಮೀನುಗಳಿಗೆ ವಿನಾಯಿತಿ ಇದೆ ಎಂದು ನುಡಿಯುತ್ತಾರೆ. ಸದರಿ ವಿನಾಯಿತಿ ಇರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವೆ. ಕಟ್ಟಡದ ಪ್ಲಾನ್ ಗೂ ಸಹ ವಿನಾಯಿತಿ ಇದೆ ಎಂದು ನುಡಿಯುತ್ತಾರೆ. ಕೆ.ಹೆಚ್.ಬಿ.ರವರು ಸ್ವತ್ತಿನ ಸ್ವಾಧೀನವನ್ನು ಪಡೆದ ನಂತರ ಭೂ ಪರಿವರ್ತನೆ ಮಾಡಿಸಿರುವುದಿಲ್ಲ, ಲೇಔಟ್ ಪ್ಲಾನ್ ಮತ್ತು ಕಟ್ಟಡ ಪ್ಲಾನ್ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸುವೆ.

ಸರ್ವೇ ನಂಬರ್ 154/2 ರಲ್ಲಿ ನಿವೇಶನ, ಮನೆ ನಿರ್ಮಿಸಲು, ರಸ್ತೆ ಮಾಡಲು ಸಂಬಂಧಪಟ್ಟ ಇಲಾಖೆಗಳಿಂದ ಪರವಾನಗಿ ಪಡೆದಿದ್ದಿರಾ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 154 ಕೆ.ಹಚ್.ಬಿ.ರವರಿಗೆ 4 ಎಕರೆ ಸ್ವತ್ತು ಸರ್ಕಾರದಿಂದ ಬಂದಿದ್ದು, ಉಳಿಕೆ ದಾವಾ ಸ್ವತ್ತು ಕೆ.ಹಚ್.ಬಿ.ರವರಿಗೆ ಬೇಕೆಂದು ಸರ್ಕಾರಕ್ಕೆ ಅರ್ಜಿ ನೀಡಿದ್ದೀರಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿಸ್ತೀರ್ಣ 4 ಎಕರೆ ಜೊತೆಗೆ ದಾವಾ ಸ್ವತ್ತನ್ನು ಸೇರಿಸಿಕೊಂಡು ಅಭಿವೃದ್ಧಿ ಪಡಿಸಿಕೊಳ್ಳಲು ಸರ್ಕಾರವು ನಿಮಗೆ ಒಪ್ಪಿಗೆ ನೀಡಿರುವುದೇ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೆ.ಹಚ್.ಬಿ.ರವರು ಸರ್ಕಾರದ ಆದೇಶಗಳನ್ನು ಪಾಲಿಸುವ ಸಂಸ್ಥೆ ಎಂದರೆ ಸರಿ. ಕೆ.ಹಚ್.ಬಿ.ರವರು ಖಾಸಗಿ ಜಮೀನು ಮತ್ತು

ಸರ್ಕಾರಿ ಜಮೀನನ್ನು ಸ್ವತಃ ನಾವು ಭೂ ಸ್ವಾಧೀನ ಮಾಡಲು ಸಾಧ್ಯವಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಸರ್ಕಾರದ ಅನುಮೋದನೆಯಿಂದ ಭೂ ಸ್ವಾಧೀನ ಮಾಡುತ್ತೇವೆ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 154 ರಲ್ಲಿ ಮನೆ ನಿರ್ಮಿಸಿರುವ ಬಗ್ಗೆ ರಸ್ತೆ ನಿರ್ಮಿಸಿರುವ ಬಗ್ಗೆ ಉದ್ಯಾನವನ ನಿರ್ಮಿಸಿರುವ ಬಗ್ಗೆ ಲೇಔಟ್ ಪ್ಲಾನ್ ನಲ್ಲಿ ಮಾಹಿತಿ ಇದೆ ಎಂದು ನುಡಿಯುತ್ತಾರೆ.

ನಿಡಿ-11 ರ ಪ್ರಕಾರ 2 ಎಕರೆ 0.25 ಗುಂಟೆ ಸ್ವತ್ತನ್ನು ಮಾತ್ರ ಬಾಗೇಪಲ್ಲಿ ಪುರಸಭೆಯವರಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.